ಓ ಎಸ್ **501/2023**

ಡಿ ಡಬ್ಲ್ಯೂ **-1**

**ದಿಃ 17.07.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎಸ್ ವಕೀಲರಿಂದಃ**

**ನನ್ನ ತಂದೆಯವರಿಗೆ 7 ಜನ ಮಕ್ಕಳಿರುತ್ತಾರೆ. ವಾದಿಗಳು ನನ್ನ ಅಣ್ಣನ ಮಕ್ಕಳು . ನಾನು ಮೊದಲಿಗೆ ವ್ಯವಸಾಯ ಮಾಡುತ್ತಿದ್ದೆ, ನಂತರ BWSSB ನಲ್ಲಿ ಕೆಲಸ ನಿರ್ವಹಿಸಿ ನಂತರ ನಿವೃತ್ತಿಯಾದ ಮೇಲೆ ವ್ಯವಸಾಯ ಮಾಡುತ್ತಿದ್ದೇನೆ. ನನಗೆ ನಿವೃತ್ತಿ ವೇತನ ಬರುತ್ತಿದೆ ಎಂದರೆ ಸರಿ.**

ದಿನಾಂಕಃ05.01.1966 ರಲ್ಲಿ ವಿಭಾಗವಾಗಿದೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವ ಹಾಗೆ ಸ.ನಂ. 24/2 ರಲ್ಲಿ 37 ಗುಂಟೆ ಜಮೀನು ಹೇಗೆ ಬಂದಿರುತ್ತದೆ ಎಂದು ಕೇಳಿದರೆ ಸಾಕ್ಷಿ ನನ್ನ ತಾಯಿಗೆ 25 ಗುಂಟೆ ಜಮೀನನ್ನು ಜೀವನಾಂಶಕ್ಕೆ ನೀಡಲಾಗಿದ್ದು , ಆ ಜಮೀನನ್ನು ನಾನೇ ವ್ಯವಸಾಯ ಮಾಡುತ್ತಿದ್ದು, ಅದನ್ನು ನಾನು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತೋರಿಸಿರುತ್ತೇನೆ .

ಸ.ನಂ. 24/2 , ಸ.ನಂ. 57 , ಸ.ನಂ. 26/4 ಮತ್ತು ಸ.ನಂ. 60 ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಎಂದು ಸೂಚಿಸಿದರೆ ಸಾಕ್ಷಿ ನಮ್ಮ ಕುಟುಂಬದಲ್ಲಿ ದಿನಾಂಕಃ15.01.1966 ರಲ್ಲಿ ವಿಭಾಗವಾಗಿದ್ದು , ನಂತರ ಪಾಲು ಪಟ್ಟಿಯನ್ನು 1970-71 ರಲ್ಲಿ ಮಾಡಿಕೊಂಡು ಅದರಲ್ಲಿ ಸ.ನಂ. 60 ರಲ್ಲಿ 1 ಎಕರೆ ಮದುವೆಯ ಹಿಡು , ಉಳಿದ 3 ಎಕರೆ 10 ಗುಂಟೆ ವಿಭಾಗ ಎಂದು ಭಾಗ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ.

ಓ ಎಸ್ 252/2012 ಮತ್ತು ಓ ಎಸ್ 536/2014 ದಾವೆಗಳನ್ನು ಮಾಯಪ್ಪನವರ ಮಗಳ ಕೈಯಲ್ಲಿ ನಾನೇ ಹಾಕಿಸಿರುತ್ತೇನೆ ಎಂದರೆ ಸುಳ್ಳು . ಸ.ನಂ. 60 ರಲ್ಲಿ 4 ಎಕರೆ 10 ಗುಂಟೆ ಜಮೀನು ನನಗೆ ಹೇಗೆ ಬಂದಿರುತ್ತದೆ ಎಂದು ಕೇಳಿದರೆ ಸಾಕ್ಷಿ ನನಗೆ ಭಾಗ ಆಗುವ ಸಮಯದಲ್ಲಿ ಮದುವೆಯಾಗದೇ ಇದ್ದ ಕಾರಣ 1 ಎಕರೆ ಜಮೀನು ನೀಡಿದ್ದು , ನಂತರ 3 ಎಕರೆ 10 ಗುಂಟೆ ಅದೇ ಸ.ನಂ. ನಲ್ಲಿ ಭಾಗ ಎಂದು ನೀಡಲಾಗಿರುತ್ತದೆ. **ಸಾಕ್ಷಿಗೆ**

**ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯಲ್ಲಿ ಅವರು ಸಹಿ ಮಾಡಿರುವುದನ್ನು ಗುರುತಿಸಿದ್ದು , ಸದರಿ ದಾಖಲಾತಿ ವಿಭಾಗಪಟ್ಟಿ ಎಂದು ಸಾಕ್ಷಿ ಗುರುತಿಸಿದ್ದರ ಮೇರೆಗೆ ಸದರಿ ವಿಭಾಗ ಪಟ್ಟಿಯನ್ನು ನಿ ಪಿ 36 ಎಂದು ಮತ್ತು ಸದರಿ ನಿ ಪಿ 36 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ 36 ಎ ಎಂದು ಗುರುತಿಸಲಾಯಿತು.**

**ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಸದರಿ ಪಹಣಿ ಸ.ನಂ. 26/4 ಕ್ಕೆ ಸಂಬಂದಪಟ್ಟಿದ್ದು ಸಾಕ್ಷಿ ಅದನ್ನು ನೋಡಿ ಸದರಿ ಪಹಣಿಯಲ್ಲಿ ಸಾಕ್ಷಿಯು ಸದರಿ ಪಹಣಿ ನನ್ನ ತಂದೆ ಮರಿಚನ್ನಯ್ಯ ರವರ ಹೆಸರಿನಲ್ಲಿ ಇರುತ್ತದೆ ಎಂದು ಗುರುತಿಸಿದ್ದು ಸದರಿ ಪಹಣಿಯನ್ನು ನಿಪಿ 37 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಸದರಿ ದಾಖಲಾತಿಯ ಪ್ರಕಾರ ನಮ್ಮ ಕುಟುಂಬದಲ್ಲಿ ವಿಭಾಗ ಆದ ಮೇಲೆ ಸ.ನಂ. 26 ರಲ್ಲಿ ಮಾಯಪ್ಪ ನವರಿಗೆ 1 ಎಕರೆ ಮಂಜೂರಾಗಿರುವ ದಾಖಲಾತಿ ಎಂದು ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿ ಪಿ 38 ಎಂದು ಗುರುತಿಸಲಾಯಿತು. ನಿಪಿ 38 ರಲ್ಲಿ ನನಗೂ ಕೂಡ 1 ಎಕರೆ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿ . ಸದರಿ ಮಂಜೂರಾತಿ ವಿಭಾಗ ಆದ ಮೇಲೆ ಆಗಿರುತ್ತದೆ.**

ಸದರಿ ಭೂಮಿ ಮಂಜೂರಾತಿ ಆದ ಸಮಯದಲ್ಲಿ ನಾನು ಸರ್ಕಾರಿ ನೌಕರಿಯಲ್ಲಿ ಇದ್ದೆ ಎಂದು ಸೂಚಿಸಿದರೆ ಸರಿ . ಸರ್ಕಾರಿ ನೌಕರಿಯಲ್ಲಿ ಇರುವ ವ್ಯಕ್ತಿಗೆ ಮಂಜೂರಾತಿಗೆ ಆ ವ್ಯಕ್ತಿ ಅರ್ಹನಾಗಿರುವುದಿಲ್ಲ ಎಂದು ಕೇಳಿದರೆ ಸಾಕ್ಷಿ ನಾವು ಒಟ್ಟು ಕುಟುಂಬದಲ್ಲಿ ಇದ್ದಾಗ 1956 ರಲ್ಲಿ ನಮ್ಮ ಜಮೀನು ತಿಪ್ಪಗೊಂಡನಹಳ್ಳಿ ಜಲಾಶಯ ಕಟ್ಟಲು ಮುಳುಗಡೆ ಆಗಿದ್ದು , 1958 ರಲ್ಲೂ ಕೂಡ 4 ಎಕರೆ ಜಮೀನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಮುಳುಗಡೆ ಆಗಿದ್ದು , ನಂತರ ನಾವು ಭಾಗ ಆದ ಮೇಲೆ ನಾವು ಅರ್ಜಿ ಹಾಕಿಕೊಂಡಿದ್ದೇವು . ಆ ಮುಳುಗಡೆ ಆದ ಜಮೀನಿನ ಆಧಾರದ ಮೇಲೆ ನಮಗೆ ಆ ಜಮೀನು ಮಂಜೂರಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ . ಸ.ನಂ. 26 ನನ್ನ ಹೆಸರಿನಲ್ಲಿ ಮಂಜೂರಾತಿ ಆಗಿರುತ್ತದೆ . ಸದರಿ ಮಂಜೂರಾತಿ ಆಗಿರುವುದು ನನ್ನ ತಂದೆಯ ಹೆಸರಿನಲ್ಲಿ ಸದರಿ ಜಮೀನಿನಲ್ಲಿ ವಾದಿಗಳಿಗೆ ಭಾಗದ ಹಕ್ಕು ಇರುತ್ತದೆ ಎಂದರೆ ಸುಳ್ಳು .

ಸ.ನಂ. 24/2 , ಸ.ನಂ. 57 , ಸ.ನಂ. 26/4 ಮತ್ತು ಸ.ನಂ. 60 ರಲ್ಲಿ ನನಗೆ ಒಟ್ಟು ವಿಸ್ತೀರ್ಣ 5 ಎಕರೆ 7 ಗುಂಟೆ ಹೇಗೆ ಬಂತು ಎಂದು ಕೇಳಿದರೆ ಸಾಕ್ಷಿ 1 ಎಕರೆ ಮದುವೆಯಾಗದೇ ಇದ್ದ ಕಾರಣಕ್ಕೆ ನನ್ನ ಭಾಗಕ್ಕೆ

ನೀಡಿರುತ್ತಾರೆ , 3 ಎಕರೆ 22 ಗುಂಟೆ ಭಾಗ , ನನ್ನ ತಾಯಿಯ ಜಮೀನು 27 ಗುಂಟೆ ಬಂದಿರುತ್ತದೆ ಮತ್ತು ನನಗೆ ಮಂಜೂರಾಗಿರುವ ಜಮೀನು ಪ್ರತ್ಯೇಕವಾಗಿ ಬಂದಿರುತ್ತದೆ .

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**